ಕೋಲಾರದ ಕೆಜಿಎಫ್‌ನಲ್ಲಿ ಜನಿಸಿದ ಕೆನತ್ ಪೊವೆಲ್, ಒಲಿಂಪಿಕ್ಸ್‌ನಲ್ಲಿ ರುಜು ಹಾಕಿದ ಕರ್ನಾಟಕದ ಮೊದಲ ಅಥ್ಲೀಟ್. ಕ್ರೀಡಾಲೋಕದಲ್ಲಿ 'ಓಟಗಳ ರಾಜ' ಎಂದೇ ಅವರು ಹೆಸರಾದವರು.

■ ಜಗನ್ನಾಥ ಪ್ರಕಾಶ್ ಎನ್.



ಕೆನತ್ ಪೊವೆಲ್ ಮಿಂಚಿನ ಓಟ



# ಕೆನತ್ ಪೊವೆಲ್

## ಚಿನ್ನದ ನಾಡಿನ ಅಪ್ರತಿಮ ಅಥ್ಲೀಟ್

ಚಿನ್ನದ ನಾಡಿನಲ್ಲಿ ಹುಟ್ಟಿ ಕರ್ನಾಟಕದ ಕ್ರೀಡಾ ಕಿರೀಟಕ್ಕೆ ಅನೇಕ ಸ್ವರ್ಣ ಗರಿಗಳನ್ನು ಸಿಕ್ಕಿಸಿದ ಅಪ್ರತಿಮ ಕ್ರೀಡಾಪಟು ಕೆನತ್ ಪೊವೆಲ್.

ಕೋಲಾರದ ಕೆಜಿಎಫ್‌ನಲ್ಲಿ ಜನಿಸಿದ ಕ್ರೀಡಾತಾರೆ ಕೆನತ್ ಲಾರೆನ್ಸ್ ಪೊವೆಲ್ (ಜ: ಏಪ್ರಿಲ್ 20, 1940), ಚಿನ್ನದ ಗಣಿಯ ಉದ್ಯೋಗಿಯೊಬ್ಬರ ಪುತ್ರ. ಅಣ್ಣಸ್ವಾಮಿ ಮೊದಲಿಯಾರ್ ಶಾಲೆಯಲ್ಲಿ ತಮ್ಮ ಶಾಲಾ ಶಿಕ್ಷಣ ಪಡೆದಿದ್ದ ಅವರಿಗೆ ಚಿಕ್ಕಂದಿನಿಂದಲೇ ಕ್ರೀಡೆಗಳೆಡೆಗೆ ಅಪಾರ ಆಸಕ್ತಿ. ಇದೇ ಆಸಕ್ತಿ ಅವರನ್ನು, ಒಲಿಂಪಿಕ್ಸ್‌ನೆಡೆಗೆ ಕರೆದೊಯ್ದಿತ್ತು.

ವೇಗದ ಓಟಗಳಲ್ಲಿ ಅನೇಕ ಸಾಧನೆಗಳನ್ನು ಮಾಡಿದ್ದರೂ ಅವರು ಮೊದಲಿಗೆ ಕಾಲಿಟ್ಟಿದ್ದು ಕ್ರಿಕೆಟ್ ಅಂಗಳಕ್ಕೆ. ಕೆ.ಜಿ.ಎಫ್.ನ ಸ್ಥಳೀಯ ಐ.ಟಿ.ಐ. ಕ್ರಿಕೆಟ್ ತಂಡದ ವೇಗದ ಬೌಲರ್ ಆಗಿ ಗುರುತಿಸಿಕೊಂಡಿದ್ದ ಕೆನತ್, ಅಥ್ಲೆಟಿಕ್ಸ್ ಕಡೆ ದೃಷ್ಟಿ ಹಾಯಿಸಿದರು. ದೂರವಾಣಿ ಕಾರ್ಖಾನೆಗೆ ನೌಕರಿಗಾಗಿ ಬೆಂಗಳೂರಿಗೆ ಬಂದಿಳಿದರು. ಆಂಗ್ಲೊ ಇಂಡಿಯನ್ ಕುಟುಂಬದವರಾದ ಅವರು, 100 ಹಾಗೂ 200 ಮೀಟರ್ ಓಟದಲ್ಲಿ ಅಭ್ಯಾಸಕ್ಕೆ ಇಳಿದಾಗ ಅವರ ವಯಸ್ಸು 19.

1963ರಲ್ಲಿ ಅಲಹಾಬಾದ್‌ನಲ್ಲಿ ಪ್ರಥಮ ಅಂತರರಾಜ್ಯ ಅಥ್ಲೆಟಿಕ್ಸ್ ಕೂಟದಲ್ಲಿ ಭಾಗವಹಿಸಿದ ಕೆನತ್ ಪೊವೆಲ್, ಎರಡು ಓಟಗಳಲ್ಲೂ ಪ್ರಥಮ ಸ್ಥಾನ ಗೆದ್ದುಕೊಂಡರು. ಆಗಿನ ಕಾಲಕ್ಕೆ 100 ಮೀಟರ್ (10.8 ಸೆ.) ಹಾಗೂ 200 ಮೀಟರ್‌ಗಳಲ್ಲಿನ (22.0 ಸೆ.) ಅವರ ಸಾಧನೆ ರಾಷ್ಟ್ರದಲ್ಲೇ ಅತ್ಯುತ್ತಮ ಸಮಯವಾಗಿತ್ತು.

ನೀಳಕಾಯದ ಕೆನತ್, ದೇಶದ ಹೊಸ ಜಿಂಕೆ ಎನ್ನಿಸಿಕೊಂಡಿದ್ದೇ ಅಲ್ಲದೆ ಹಲವು ದಾಖಲೆಗಳಿಗೂ ಕಾರಣರಾದರು. ಪುಣೆಯಲ್ಲಿ (1965) ನಡೆದ ರಾಷ್ಟ್ರೀಯ ಕೂಟದಲ್ಲಿ 100 ಮೀಟರ್ ಓಟದಲ್ಲಿ ಹೊಸ ರಾಷ್ಟ್ರೀಯ ದಾಖಲೆ ಮಾಡಿದ (10.04 ಸೆ.) ಅವರು, 1960–70ರ ದಶಕದಲ್ಲಿ ಒಲಿಂಪಿಕ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ಈ ಮೂಲಕ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ರುಜು ಹಾಕಿದ ಮೊದಲ ಕರ್ನಾಟಕದ ಅಥ್ಲೀಟ್ ಎಂದು ಕರೆಸಿಕೊಂಡರು.

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡು 4x400 ಮೀಟರ್ ರಿಲೇಯಲ್ಲಿ, 'ಹಾರುವ ಸಿಖ್' ಮಿಲ್ಖಾ ಸಿಂಗ್‌ರೊಂದಿಗೆ ಭಾಗವಹಿಸಿದ್ದ ಭಾರತೀಯ ಓಟಗಾರರಲ್ಲಿ ಕೆನತ್ ಕೂಡ ಒಬ್ಬರು.

ಬ್ಯಾಂಕಾಕ್ ಏಷ್ಯನ್ ಕ್ರೀಡೆಗಳ 4x100 ಮೀಟರ್ ರಿಲೇಯಲ್ಲಿ ಕಂಚು ಪದಕ ಪಡೆದ ಭಾರತೀಯ ತಂಡದಲ್ಲೂ ಪೊವೆಲ್ ಓರ್ವ ಓಟಗಾರ. 1963–68ರ ಅವಧಿಯಲ್ಲಿ 'ಓಟಗಳ ರಾಜ' ಎನಿಸಿಕೊಂಡಿದ್ದ ಕೆನತ್ ಪೊವೆಲ್, 100 ಹಾಗೂ 200 ಮೀಟರ್ ಓಟದ ಸ್ಪರ್ಧೆಗಳಲ್ಲಿ ಗೆದ್ದ ಚಿನ್ನದ ಪದಕಗಳ ಸಂಖ್ಯೆ 17.

1966ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತೀಯ ತಂಡವನ್ನು ತ್ರಿವರ್ಣ ಧ್ವಜ ಹಿಡಿದು (ಜಮೈಕಾ ಕಿಂಗ್‌ಸ್ಟನ್) ಮುನ್ನಡೆಸಿದ ಕೆನತ್ ಪೊವೆಲ್, ಸ್ಪರ್ಧೆಗೆ ಎರಡು ದಿನಗಳ ಹಿಂದೆ ಗಾಯಾಳುವಾಗಿ ಸ್ಪರ್ಧೆಯಿಂದ ಹಿಂದೆ ಸರಿದರು.

1965ರಲ್ಲಿ ಕರ್ನಾಟಕಕ್ಕೆ ಅರ್ಜುನ ಪ್ರಶಸ್ತಿ ತಂದುಕೊಟ್ಟ ಪೊವೆಲ್, ಅಥ್ಲೆಟಿಕ್ಸ್ ಸ್ಪರ್ಧೆ ತೊರೆದ ನಂತರ ಹ್ಯಾಂಡ್‌ಬಾಲ್ ಆಡತೊಡಗಿದರು. ಹಿರಿಯರ ಕ್ರೀಡಾಕೂಟಗಳಲ್ಲೂ ನಿರಂತರವಾಗಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ಅವರು, ಕರ್ನಾಟಕದ ಕ್ರೀಡಾಪಟುಗಳ ಸಮಸ್ಯೆಗಳಿಗೆ ಕೊನೆಯವರೆಗೂ ದನಿಯಾಗಿದ್ದರು.

82 ವರ್ಷ ಪ್ರಾಯದ ಕೆನತ್ ಮೊನ್ನೆ ವಿಶ್ವಕಪ್ ಫುಟ್ಬಾಲ್ ಪಂದ್ಯವೊಂದನ್ನು ವೀಕ್ಷಿಸಿ ಮಲಗಿದವರು ಹಾಗೆಯೇ ಮರೆಯಾದರು. ಸೋಲಿರಲಿ, ಗೆಲುವಿರಲಿ ಸ್ಥಿತಪ್ರಜ್ಞರಾಗಿರುತ್ತಿದ್ದ ಅವರು, ಇದೇ ಡಿಸೆಂಬರ್ 11ರಂದು ಇಹಲೋಕ ತ್ಯಜಿಸಿದರು.

ಪ್ರತಿಕ್ರಿಯಿಸಿ: feedback@sudha.co.in